# ಜಾನಕಿಯಷ್ಟು ಒಳ್ಳೆಯವಳು ನಾನಲ್ಲ



**ಅಂಜನಾ**
**ಸ್ಟಾರ್ ಸುವರ್ಣ 'ಜಾನಕಿ ಸಂಸಾರ'ದ ಜಾನಕಿ**

◆ ರುಕ್ಮಿಣಿ ಆಗಿದ್ದವರು ಈಗ ಜಾನಕಿ ಆಗಿದ್ದೀರಿ. ಇದರಲ್ಲಿ ಅಂಜನಾ ಎಲ್ಲಿ ಇದ್ದಾರೆ?

ನಾನು 17 ವರ್ಷದವಳಿದ್ದಾಗ ರುಕ್ಮಿಣಿ ಪಾತ್ರವನ್ನು ಮಾಡುತ್ತಿದ್ದೆ. ಆ ಪಾತ್ರವನ್ನು ನಿರ್ವಹಿಸುತ್ತಿದ್ದ ದಿನಗಳಲ್ಲಿ ಅದರ ಮಹತ್ವ ಕೂಡ ಗೊತ್ತಿರಲಿಲ್ಲ. ದೊಡ್ಡ ಪಾತ್ರವೊಂದನ್ನು ಮಾಡುತ್ತಿದ್ದೇನೆ ಎನ್ನುವುದು ಗೊತ್ತಿರಲಿಲ್ಲ. ನಿರ್ದೇಶಕರು ಏನು ಹೇಳುತ್ತಾರೋ ಅದನ್ನು ನಾನು ನಿರ್ವಹಿಸುತ್ತಿದ್ದೆ.

ಜಾನಕಿಯನ್ನು ನೋಡಿದರೆ, ತುಂಬ ಜವಾಬ್ದಾರಿ ಇರುವ ಪಾತ್ರ. ತನ್ನ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಆಕೆ ನಿರ್ವಹಿಸುತ್ತಾಳೆ. ಯಾರು ಏನೂ ಹೇಳುವ ಅಗತ್ಯವೇ ಇಲ್ಲ. ಸಮಯಕ್ಕೆ ಸರಿಯಾಗಿ ಏನು ಮಾಡಬೇಕೊ ಅದೆಲ್ಲವನ್ನು ಪ್ರಾಮಾಣಿಕವಾಗಿ ಮಾಡುತ್ತಾಳೆ. ಪ್ರತಿ ಕೆಲಸವೂ ಶಿಸ್ತುಬದ್ಧವಾಗಿ ಮಾಡುವುದು ಅವಳ ಗುಣ. ಅಂಜನಾ ಆಗಿ ನಾನು ಅಷ್ಟು ಒಳ್ಳೆಯವಳಲ್ಲ. ಜಾನಕಿ ಎಂತಹ ಪಾಪದವಳು ಎಂದರೆ, ಯಾರೇ ನೋವು ಮಾಡಿದರೂ ನಗುತ್ತಲೇ ಇರುತ್ತಾಳೆ.

◆ ನಟನೆಯಲ್ಲಿ ಬೆಳೆದಿದ್ದು ಹೇಗೆ?

ಚಿಕ್ಕಬಳ್ಳಾಪುರ ಸಮೀಪದ ಹಳ್ಳಿಯಲ್ಲಿ ಹುಟ್ಟಿದ್ದರೂ ಬೆಳೆದಿದ್ದು ಬೆಂಗಳೂರು. ಬಾಲ್ಯದಿಂದಲೂ ಡಾನ್ಸ್ ತುಂಬ ಇಷ್ಟಪಟ್ಟು ಮಾಡುತ್ತಿದ್ದೆ. ಶಾಲೆ–ಕಾಲೇಜುಗಳಲ್ಲಿ ಜನಪ್ರಿಯ ಡಾನ್ಸರ್. ಆಗ ನಮ್ಮ ಅಧ್ಯಾಪಕರು ನಟನೆಯನ್ನು ಏಕೆ ಮಾಡಬಾರದು ಎನ್ನುವ ಸಲಹೆಯನ್ನು ನೀಡುತ್ತಿದ್ದರು. ನಮ್ಮದು ದೊಡ್ಡ ಕುಟುಂಬ, ಮನೆಯಲ್ಲಿ ಇದಕ್ಕೆ ಸಕಾರಾತ್ಮಕ ಸ್ಪಂದನೆ ಸಿಗಲಿಲ್ಲ. ನನ್ನ ತಂದೆಗೆ ನಾನು ನಟಿಯಾಗಬೇಕು ಎನ್ನುವ ಆಸೆ ಇತ್ತು. ಕಾಲೇಜಿನಲ್ಲಿ ಡಾನ್ಸ್ ಮಾಡಬೇಕಿತ್ತು. ಆ ಸಂದರ್ಭದಲ್ಲಿ ಮೇಕಪ್ ಕಲಾವಿದರೊಬ್ಬರು, ಆಡಿಷನ್ ನೀಡಲು ಸೂಚಿಸಿದರು. ಕುತೂಹಲದಿಂದ ಪ್ರಯತ್ನ ಮಾಡಿದೆ. ಸಿಗುವುದಿಲ್ಲ ಎನ್ನುವ ಭರವಸೆಯ ಮೇಲೇ ಹೋಗಿದ್ದೆ. ನೂರಾರು ಜನರಲ್ಲಿ ನನ್ನನ್ನು ಸೇರಿ ಹತ್ತು ಮಂದಿಯನ್ನು ಆಯ್ಕೆ ಮಾಡಿಕೊಂಡರು. ಮತ್ತೊಂದು ದಿನ ಬರಲು ತಿಳಿಸಿದರು. ನನಗೆ ಅವತ್ತು ಒಂದು ಡೈಲಾಗ್ ಕೂಡ ಹೇಳಲು ಆಗಿರಲಿಲ್ಲ. ನಿರ್ದೇಶಕರಿಗೆ ನನ್ನ ಆತ್ಮವಿಶ್ವಾಸದ ಮೇಲೆ ಭರವಸೆ ಹುಟ್ಟಿದ್ದರಿಂದ ಆ ಪಾತ್ರವನ್ನು ನನಗೆ ಕೊಟ್ಟರು. ಈಗ ಇದೇ ವೃತ್ತಿಯಾಗಿದೆ.

◆ ನಿಮ್ಮ ಹವ್ಯಾಸಗಳೇನು?

ಚಿಕ್ಕ ಕಥೆಗಳ ಪುಸ್ತಕಗಳನ್ನು ಓದುವ ಹವ್ಯಾಸ ಇದೆ. ಇತಿಹಾಸದ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಇದೆ. ಸಮಯ ಸಿಕ್ಕರೆ ಈಗಲೂ ಡಾನ್ಸ್ ಮಾಡುತ್ತಿರುತ್ತೇನೆ. ಸುಮಾರು ಹತ್ತು ವರ್ಷಗಳಿಂದ ನಟಿಸುತ್ತಿದ್ದೇನೆ. ಬೇರೆ ಯಾವುದಕ್ಕೂ ಸಮಯ ಸಿಗುತ್ತಿಲ್ಲ. ಬ್ಯಾಡ್ಮಿಂಟನ್ ಅಂದರೆ ತುಂಬ ಇಷ್ಟ.

◆ ಮುಂದಿನ ಭವಿಷ್ಯದ ಯೋಚನೆ ಏನು?

ಸಾಮಾನ್ಯವಾಗಿ ಯಾವುದರ ಬಗ್ಗೆನೂ ಪ್ಲಾನ್ ಮಾಡುವುದಿಲ್ಲ. ಈಗ ಹೇಗಿದ್ದೇನೋ ಅಂತೆಯೇ ಮುಂದಿನ ದಿನಗಳು ತೆಗೆದುಕೊಂಡಂತೆ ಸಾಗುತ್ತೇನೆ. ಮುಂದೆ ಏನು ಎಂದು ಯೋಚಿಸುವುದಿಲ್ಲ. ಹಾಗೆಂದು ಸುಮ್ಮನೆ ಕೂರುವುದಿಲ್ಲ. ಏನಾದರೂ ಮಾಡಲೇಬೇಕು ಎನ್ನುವ ಕನಸು ಇದ್ದೇ ಇದೆ. ಮೊದಲು ಬಂದಾಗ ನಾನು ಕುರುಡಿಯಾಗಿ ಪಾತ್ರವನ್ನು ನಿರ್ವಹಿಸಬೇಕು ಅಂದುಕೊಂಡಿದ್ದೆ. ಪೊಲೀಸ್ ಆಗಬೇಕು, ಸಿಕ್ಸಾಪಟ್ಟೆ ಫೈಟ್ ಮಾಡಬೇಕು ಎಂಬ ಆಸೆಯೂ ಇತ್ತು. ಇಲ್ಲಿ ಹತ್ತಾರು ಬಗೆಯ ಭಿನ್ನ ಪಾತ್ರಗಳನ್ನು ಮಾಡಿದ್ದೇನೆ. ಕಥೆಯಲ್ಲಿ ಪಾತ್ರಕ್ಕೆ ಮಹತ್ವ ಇದ್ದರೆ ಯಾವುದೇ ಪಾತ್ರ ಮಾಡಲು ಸಿದ್ಧ.

◆ ಜಾನಕಿ ಸಂಸಾರವನ್ನು ನೀವು ಹೇಗೆ ಅನುಭವಿಸುತ್ತಿದ್ದೀರಿ?

ಈ ಪಾತ್ರವನ್ನು ಮಾಡುತ್ತಿರುವುದು ಹೆಮ್ಮೆಯ ಭಾವವನ್ನು ಮೂಡಿಸಿದೆ. ಕುಟುಂಬ ನಿರ್ವಹಣೆ ಮಾಡುವುದು ಅಷ್ಟು ಸುಲಭ ಅಲ್ಲ ಎನ್ನುವುದು ಗೊತ್ತಾಗಿದೆ. ಒಂದೊಂದು ವ್ಯಕ್ತಿತ್ವವೂ ಭಿನ್ನ. ಮನೆಯ ಎಲ್ಲರನ್ನೂ ಸಂಭಾಳಿಸಿ ಸಂಸಾರವನ್ನು ನಡೆಸುವುದು ಸುಲಭದ ಕೆಲಸ ಅಲ್ಲ. ಆ ವಿಷಯದಲ್ಲಿ ಜಾನಕಿ ಗ್ರೇಟ್ ಅಂತ ಅನ್ನಿಸುತ್ತದೆ. ಸೆಟ್ ಕೂಡ ತುಂಬ ಚೆನ್ನಾಗಿದೆ.

◆ ನಿಮ್ಮನ್ನು ಅಪರಾಧಿಯಂತೆ ಬಿಂಬಿಸುವ ಕುತಂತ್ರ ನಡೆಯುತ್ತಿದೆ. ಅದರ ಸ್ವಾರಸ್ಯ ಏನು?

ಇದೆಲ್ಲಾ ಮುಂದಿನ ಕಂತುಗಳಲ್ಲಿ ಗೊತ್ತಾಗುತ್ತದೆ. ಆ ಸತ್ಯದ ಹುಡುಕಾಟದಲ್ಲಿಯೇ ಕಥೆ ಮುಂದುವರಿಯುತ್ತದೆ. ಅದಕ್ಕೊಂದು ಕಾಲ ಕೂಡಿಬರಬೇಕು. ಸದ್ಯದಲ್ಲಿ ಅದೆಲ್ಲ ಬಯಲಾಗುತ್ತದೆ ಎಂದು ಅಂದುಕೊಂಡಿದ್ದೇನೆ.

■ **ರಾಘವೇಂದ್ರ ಕೆ.**